

# ರಕ್ಕ ನರಿಗೆ ತಕ್ಕ ಶಾಸ್ತಿ

■ ಅರವಿಂದ ಜಿ. ಜೋಷಿ

ಕಲೆ: ಸಂತೋಷ್ ಸಸಿಹಿತ್ಲು

ತುಂಬಾ ಹಸಿದಿದ್ದ ನರಿಯೊಂದು ಆಹಾರ ಅರಸುತ್ತ ಈ ಅಡವಿಗೆ ಬಂದಿತ್ತು. ಈ ಅಡವಿಯಲ್ಲಿ ಸಾಕಷ್ಟು ಗಿಡ ಮರಗಳು ಇದ್ದುದರಿಂದ ಪುಟ್ಟ ಪುಟ್ಟ ಪ್ರಾಣಿಗಳು ತನಗೆ ದೊರೆಯಬಹುದೆಂದು ಲೆಕ್ಕಾಚಾರ ಹಾಕಿತ್ತು. ಆ ಅಡವಿಯ ಮಧ್ಯ ಭಾಗದಲ್ಲಿ ಒಂದು ಪುಟ್ಟ ತೊರೆ ಇತ್ತು. ಅದರ ಎರಡೂ ಬದಿ ದಟ್ಟವಾಗಿ ಗಿಡಗಂಟಿಗಳು ಬೆಳೆದಿದ್ದವು. ಆ ತೊರೆಗೆ ಯಾವುದಾದರೂ ಪುಟ್ಟ ಪ್ರಾಣಿಗಳು ನೀರು ಕುಡಿಯಲು ಬಂದರೆ ಅದನ್ನು ಕಬಳಿಸುವ ಯೋಚನೆ ಮಾಡಿಕೊಂಡಿತ್ತು. ಹೀಗಾಗಿ ಆ ನರಿ ಅಲ್ಲಿದ್ದ ಒಂದು ದೊಡ್ಡ ಮರದ ಹಿಂದೆ ಅವಿತುಕೊಂಡಿತ್ತು. ಕೆಲ ನಿಮಿಷಗಳ ನಂತರ ಅದು ಊಹಿಸಿದಂತೆ ಹತ್ತಾರು ದಷ್ಟಪುಷ್ಟ ಮೊಲಗಳು ನೀರು ಕುಡಿಯಲು ಆ ತೊರೆಗೆ ಬಂದಿದ್ದವು. ಮರದ ಮರೆಯಲ್ಲಿ ನಿಂತು ಅವುಗಳನ್ನು ನೋಡಲಾರಂಭಿಸಿದಾಗ ಆ ನರಿಯ ಬಾಯಲ್ಲಿ ಜೊಲ್ಲು ಸುರಿಯತೊಡಗಿತು. ಆಗ ಅದು ತಾನು ಹೇಗಾದರೂ ಮಾಡಿ ಒಂದೊಂದೇ ಮೊಲವನ್ನು ತಿನ್ನಬೇಕು ಎಂದಾಗ ಅದರ ತಲೆಯಲ್ಲಿ ಪಕ್ಕನೆ ಒಂದು ಯೋಚನೆ ಹೊಳೆಯುತ್ತದೆ. ತಕ್ಷಣವೇ ಅದು ಮರದ ಹಿಂದೆ ಬಂದು ಮೊಲಗಳು ನೀರು ಕುಡಿಯಲು ಕುಳಿತ ವಿರುದ್ಧ ದಿಕ್ಕಿಗೆ ಅಳುತ್ತಿರುವಂತೆ ನಾಟಕ ಮಾಡುತ್ತದೆ. ಅದನ್ನು ಕೇಳಿಸಿಕೊಂಡ ಮೊಲದ ಗುಂಪಿನ ನಾಯಕ ಗಾಬರಿಗೊಂಡು ಎಲ್ಲರೊಂದಿಗೆ ಅಲ್ಲಿಂದ ಓಡಿ ಹೋಗಲು ಮುಂದಾದಾಗ, ಆ ನರಿ ತಾನು ಕುಳಿತಲ್ಲಿಂದಲೇ ಇನ್ನಷ್ಟು ಜೋರಾಗಿ ಅಳಲು ಆರಂಭಿಸುತ್ತದೆ. ಅದನ್ನು ಕಂಡ ಮೊಲದ ನಾಯಕ ಮರುಕಗೊಂಡು ನಿಂತಲ್ಲಿಂದಲೇ 'ಯಾಕಣ್ಣಾ... ಏನಾಯ್ತು? ಯಾಕೆ ಅಳುತ್ತಿದ್ದೀ?' ಎಂದು ಕೇಳಿತು.

ದೂರ್ತ ನರಿ 'ಹೇಗೆ ಹೇಳಲಿ ತಮ್ಮಾ ಈ ಗಿಡಗಂಟಿಗಳ ಪೊದೆಯಲ್ಲಿ ಅವಿತುಕೊಂಡ ಹುಲಿಯೊಂದು ನನ್ನ ಎರಡು ಮೂರು ಮರಿಗಳನ್ನು ತಿಂದು ಹಾಕಿದೆ. ಅದರಿಂದ ತಪ್ಪಿಸಿಕೊಂಡು ಓಡಿ ಬಂದಿದ್ದೇ ನನ್ನ ಪುಣ್ಯ' ಎಂದಿತು. ಆಗ ಮೊಲದ ನಾಯಕ 'ಈಗ ಆ ಹುಲಿ ಎಲ್ಲಿದೆ?' ಎಂದು ಪ್ರಶ್ನೆ ಮಾಡಿದಾಗ ನರಿ ಕಣ್ಣೀರು ಒರೆಸಿಕೊಂಡಂತೆ ನಾಟಕ ಆಡುತ್ತ 'ಏಯ್... ಸ್ವಲ್ಪ ಮೆಲ್ಲಗೆ ಮಾತಾಡು.. ಅದು ಇಲ್ಲೇ ಎಲ್ಲೋ ಇದೆ. ಇನ್ನು ನಿಮ್ಮನ್ನು ಕಂಡರೆ ಎಲ್ಲರನ್ನೂ ಒಂದೇ ಏಟಿಗೆ ಮುಗಿಸಿ ಬಿಡುತ್ತದೆ' ಎಂದಿತು. ಮೊಲದ ನಾಯಕನಿಗೆ ಇನ್ನಷ್ಟು ಭಯ ಉಂಟಾಗಿ 'ಹೌದಾ? ಹಾಗಿದ್ದರೆ... ನಾವು ಇಲ್ಲಿಂದ ವಾಪಸ್ ಹೋಗುವ ಬಗೆ ಹೇಗೆ?' ಎಂದು ಪ್ರಶ್ನಿಸಿತು. ನರಿ 'ನೀನೇನು ಚಿಂತೆ ಮಾಡಬೇಡ ನನಗೆ ಗುಟ್ಟಾದ ಒಂದು ದಾರಿ ಗೊತ್ತಿದೆ. ನಿಮ್ಮೆಲ್ಲರನ್ನು ನಾನು ಅಲ್ಲಿಗೆ ಕರೆದೊಯ್ಯುವೆ' ಎನ್ನುತ್ತ ದೂರದಲ್ಲಿ ಬಿದ್ದಿದ್ದ ಒಂದು ಡ್ರಮ್ ತೋರಿಸಿ, 'ಅಗೋ ಅಲ್ಲಿ ಕಾಣುತ್ತಲ್ಲ ಆ ಡ್ರಮ್ಮಿನಲ್ಲಿ ನೀವು ಒಬ್ಬೊಬ್ಬರಾಗಿ ಬಂದರೆ ನಾನು ಅಲ್ಲಿನ ಇಳಿಜಾರು ಜಾಗಕ್ಕೆ ನೂಕಿ ಕೊಂಡು ಹೋಗುವೆ. ಅಲ್ಲಿ ಇರುವ ವಿಶಾಲ ಮರದ ಕೆಳಗೆ ಒಂದು ಪೊಟರೆ ಇದೆ. ಯಾರಿಗೂ ಗೊತ್ತಾಗಲ್ಲ ನೀವೆಲ್ಲ ಅಲ್ಲಿ ಹೋಗಿ ಆರಾಮದಿಂದ ಇರಬಹುದು' ಎಂದಿತು. ಜೀವ ಭಯದಲ್ಲಿ ಇದ್ದ ಆ ಮೊಲದ ನಾಯಕ ಸದ್ಯ ನಮ್ಮ ಜೀವ ಉಳಿದರೆ ಸಾಕು ಎಂದು ತನ್ನ ಸಮ್ಮತಿ ಸೂಚಿಸಿತು. ಅಷ್ಟಕ್ಕೇ ನರಿ ಒಳ ಒಳಗೇ ಹಿರಿ ಹಿರಿ ಹಿಗ್ಗಲಾರಂಭಿಸಿತು.

ನಂತರ ನರಿ 'ನೀವು ಇಲ್ಲೇ ಇರಿ ನಾನು ಹೋಗಿ ಆ ಡ್ರಮ್ ತರುವೆ ಎಂದು ಹೋಯಿತು. ವಾಸ್ತವದಲ್ಲಿ ಅದು ಡ್ರಮ್ಮಿನೊಳಗೆ ಒಂದೊಂದೇ ಮೊಲವನ್ನು ಕೂರಿಸಿ ಇಳಿಜಾರು ಜಾಗದಲ್ಲಿ ತಳ್ಳಿದಂತೆ ನಂಬಿಸಿ ಅವುಗಳನ್ನು ಕಬಳಿಸುವ ಯೋಚನೆ ಹಾಕಿಕೊಂಡಿತ್ತು. ನರಿ ಹಾಗೂ ಮೊಲದ